ಮಡಿಕೇರಿಯಲ್ಲಿರುವ ರಾಜ ಗದ್ದುಗೆ ಅಭಿವೃದ್ಧಿಗೆ ಹಣ ಬಿಡುಗಡೆ.

2186(2733) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) :— ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊಡಗು ಜಿಲ್ಲೆ ಮಡಿಕೇರಿಯಲ್ಲಿರುವ ರಾಜ ಗದ್ದುಗೆ ಅಭಿವೃದ್ಧಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಗದ್ದುಗೆಯನ್ನು ಸಂರಕ್ಷಿಸಿಡಲು ಏನು ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು)

ಆ) ಸದರಿ ಗದ್ದುಗೆಗೆ ಎಷ್ಟು ವಿಸ್ತೀರ್ಣ ಜಾಗವಿದೆ ಇರುವ ಎಲ್ಲಾ ಜಾಗವು ಗದ್ದುಗೆಯ ವಶದಲ್ಲಿದೆಯೇ ಇಲ್ಲದಿದ್ದರೆ ವಶಪಡಿಸಿಕೊಳ್ಳಲು ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು) :—

ಅ) ರೂ. 10.60 ಲಕ್ಷಗಳನ್ನು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ನಿರ್ದೇಶಕರಿಗೆ ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ.

ಗದ್ದುಗೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

ಗದ್ದುಗೆ ಮೇಲೆ ಪಾಚಿ ಕಟ್ಟಿರುವುದನ್ನು ತೆಗೆಯುವುದು. ಅವಶ್ಯಕತೆ ಇರುವ ಜಾಗದಲ್ಲಿ ಪ್ಲಾಸ್ಟರಿಂಗ್ ಮಾಡುವುದು, ಡೂಮ್‌ಗಳ ಮೇಲ್ಛಾಗ ದುರಸ್ತಿ, ಪ್ಯಾರಪಟ್ಟು ವಾಲ್‌ಗಳನ್ನು ಸುಸ್ಥಿತಿಗೊಳಿಸುವುದು, ಭಾವಣಿಗಳ ಅಲಂಕಾರವನ್ನು ಸಜ್ಜುಗೊಳಿಸುವುದು, ಬಸವನ ಪ್ರತಿಮೆಯನ್ನು ಪುನರ್ ರಚಿಸುವುದು, ನೆಲದ ಫ್ಲೂರಿಂಗ್ ಗದ್ದುಗೆಯ ಕಲ್ಲಿನ ಭಾಗಗಳನ್ನು ಕೆಮಿಕಲ್ ನಿಂದ ಸ್ವಚ್ಛಗೊಳಿಸುವುದು, ಅವಶ್ಯವಿರುವ ಜಾಗದಲ್ಲಿ ಬಾಗಿಲು ಕಿಟಕಿಗಳ ದುರಸ್ತಿ ಬಾಗಿಲು ಕಿಟಕಿಗಳಿಗೆ ಬಣ್ಣ ಹಚ್ಚುವುದು, ಗದ್ದುಗೆಯ ಒಳಭಾಗದಲ್ಲಿ ತೂಗುದೀಪ ಕಟ್ಟಡದ ವಿದ್ಯುದ್ದೀಕರಣ ಮಾಡಲಾಗಿದೆ.

ಆ) ಕೊಡಗು ಜಿಲ್ಲೆಯ ಮಡಿಕೇರಿ ನಗರದಲ್ಲಿರುವ ವೀರರಾಜರ ಮತ್ತು ಲಿಂಗರಾಜರ ಗದ್ದುಗೆಗಳ-ಅವುಗಳಿಗೆ ಸೇರಿದ ಜಾಗದ ವಿಸ್ತೀರ್ಣವು ಸುಮಾರು 19.26 ಎಕರೆಗಳಾಗಿರುತ್ತೆ. ರಾಜ್ಯ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯವು ಗದ್ದುಗೆಗಳನ್ನು ರಾಜ್ಯ ಸಂರಕ್ಷಿತ ಸ್ಮಾರಕವೆಂದು ಘೋಷಿಸಲಾಗಿದೆ. ಸದರಿ ಜಾಗವು ಕೊಡಗು ದೇವಸ್ಥಾನದ ಸಮಿತಿಯ ಮಾಲಿಕತ್ವದಲ್ಲಿರುತ್ತದೆ. ದೇವಸ್ಥಾನದ ಸಮಿತಿಯ

ಮಾಲಿಕತ್ವದಲ್ಲಿರುತ್ತದೆ. ಸುಮಾರು 3 ಎಕರೆಯ ಜಾಗ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಜಾಗದಲ್ಲಿ ಹಲವಾರು ವರ್ಷಗಳ ಹಿಂದೆಯೇ ಮನೆಗಳನ್ನು ಮಾಡಿರುವುದು ತಿಳಿದುಬಂದಿದೆ. ಸದರಿ ರಾಜರುಗಳ ಗದ್ದುಗೆಗಳನ್ನು ಮತ್ತು ಅವುಗಳಿಗೆ ಸೇರಿದ ಸುತ್ತಮುತ್ತಲಿನ ಜಾಗದ ಭೂ ಮಾಪನ ಮಾಡಿಸಿ ಚಕ್ಕುಬಂದಿಯನ್ನು ನಿಗಧಿಪಡಿಸಲಾಗುವುದು. ಒತ್ತುವರಿಯಾಗದಂತೆ ಹಾಗೂ ಯಾವುದೇ ಕಟ್ಟಡಗಳ ನಿರ್ಮಾಣಕ್ಕಾಗಿ ಪರವಾನಿಗೆಯನ್ನು ನೀಡದಂತೆ ಹಾಗೂ ಗದ್ದುಗೆಗಳ ಮತ್ತು ಅವುಗಳಿಗೆ ಸೇರಿದ ಜಾಗವನ್ನು ಸಂರಕ್ಷಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಹಾಗೂ ಜಿಲ್ಲಾ ಪೋಲಿಸ್ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ.

ಕೊಡಗು ಜಿಲ್ಲೆಯಲ್ಲಿ ನೋಂದಣಿಯಾಗಿರುವ ಸಂಘಸಂಸ್ಥೆಗಳಿಗೆ ಕ್ರೀಡಾ ಸಾಮಾಗ್ರಿಗಳ ವಿತರಣೆ.

2187(2734) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) :— ಮಾನ್ಯ ಯುವಜನ ಸೇವೆಗಳು ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ಕ್ರೀಡಾ ಸಂಘ ಸಂಸ್ಥೆಗಳು ದಾಖಲಾಗಿವೆ? ಅವುಗಳು ಯಾವುವು? ತಾಲ್ಲೂಕುವಾರು ವಿವರ ನೀಡುವುದು?

ಆ) ಕೊಡಗು ಜಿಲ್ಲೆಯಲ್ಲಿ ನೊಂದಣಿಯಾಗಿರುವ ಯಾವ ಯಾವ ಸಂಘ ಸಂಸ್ಥೆಗಳಿಗೆ ಎಷ್ಟು ಮೊತ್ತದ ಕ್ರೀಡಾ ಸಾಮಗ್ರಿಯನ್ನು ವಿತರಣೆ ಮಾಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ (ಯುವಜನ ಸೇವೆಗಳು ಮತ್ತು ಕ್ರೀಡಾ ರಾಜ್ಯ ಸಚಿವರು) :—

ಅ) ಕೊಡಗು ಜಿಲ್ಲೆಯಲ್ಲಿ ಕ್ರೀಡಾ ಸಂಘ ಎಂಬ ಹೆಸರಿನಲ್ಲಿ ಯಾವ ಸಂಸ್ಥೆಗಳು ಇರುವುದಿಲ್ಲ. ಯುವಕ ಯುವತಿ ಮಂಡಳಿಗಳು ನೋಂದಣಿಯಾಗಿರುತ್ತವೆ.

ಕೊಡಗು ಜಿಲ್ಲೆಯಲ್ಲಿ ಒಟ್ಟು 372 ಯುವಕ ಸಂಘಗಳು ಹಾಗೂ 76 ಯುವತಿ ಮಂಡಳಿಗಳು ನೋಂದಣಿಯಾಗಿರುತ್ತವೆ. ವಿವರಗಳನ್ನು ಅನುಬಂಧ-ಅ ರಲ್ಲಿ ಲಗತ್ತಿಸಿದೆ. (ತಾಲ್ಲೂಕುವಾರು ವಿವರ)

ಆ) ಕೊಡಗು ಜಿಲ್ಲಾ ಪಂಚಾಯತ್ ಕಾರ್ಯಕ್ರಮದಲ್ಲಿ 2000-01ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ನೋಂದಣಿಯಾಗಿರುವ 21 ಯುವಕ ಯುವತಿ ಮಂಡಳಿಗಳಿಗೆ ತಲಾ ರೂ. 3,500-00ರಂತೆ ಕ್ರೀಡಾ ಸಾಮಗ್ರಿಗಳನ್ನು ಖರೀದಿಸಿ ವಿತರಿಸಲಾಗಿದೆ.

ವಿವರಗಳನ್ನು ಅನುಬಂಧ - 'ಆ' ರಲ್ಲಿ ಲಗತ್ತಿಸಲಾಗಿದೆ.